ಕರ್ನಾಟಕ ಸರ್ಕಾರ

ಸಂ.ಡಿಟಿಇ/473/ಎಸಿಎಂ(2)/2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು – 560 001.
ದಿನಾಂಕ:08-01-2018.

**-:: ಜ್ಞಾಪನ ::-**

**ವಿಷಯ:-** ಶ್ರೀ ಬಾಹುಬಲಿ ಪಾಲಿಟೆಕ್ನಿಕ್, ಶ್ರವಣಬೆಳಗೊಳ ಈ ಸಂಸ್ಥೆಗೆ ವಿಶೇಷ ರಜೆ ಘೋಷಿಸುವ ಬಗ್ಗೆ.

**ಉಲ್ಲೇಖ:-** ಪ್ರಾಂಶುಪಾಲರು, ಶ್ರೀ ಬಾಹುಬಲಿ ಪಾಲಿಟೆಕ್ನಿಕ್, ಶ್ರವಣಬೆಳಗೊಳ ಇವರ ಪತ್ರ ಸಂ.ಎಸ್‌ಬಿಪಿ/1294/2017-18, ದಿ:18-12-2017.

-000000000-

ಉಲ್ಲೇಖದಲ್ಲಿ ನಮೂದಿಸಿರುವ ಶ್ರೀ ಬಾಹುಬಲಿ ಪಾಲಿಟೆಕ್ನಿಕ್, ಶ್ರವಣಬೆಳಗೊಳ ಪ್ರಾಂಶುಪಾಲರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ಶ್ರವಣಬೆಳಗೊಳದಲ್ಲಿ ಪ್ರತಿಷ್ಠಾಪಿಸಿರುವ ಭಗವಾನ್ ಶ್ರೀ ಬಾಹುಬಲಿಗೆ ದಿನಾಂಕ:07-02-2018 ರಿಂದ 26-02-2018ರವರೆಗೆ ಮಹಾಮಸ್ತಕಾಭಿಷೇಕವನ್ನು ಏರ್ಪಡಿಸಲಾಗಿದ್ದು, ಈ ಸಮಾರಂಭದಲ್ಲಿ ಭಾಗವಹಿಸುವ ಅತಿಥಿಗಳಿಗೆ ವಸತಿ ಸೌಲಭ್ಯಗಳಿಗೆ ಉಪಯೋಗಿಸಿಕೊಳ್ಳಲು ಅನುವಾಗುವಂತೆ ಸಂಸ್ಥೆಯ ಎಲ್ಲಾ ತರಗತಿಯ ಕೊಠಡಿಗಳು ಮತ್ತು ವಿದ್ಯಾರ್ಥಿನಿಲಯದ ಕೊಠಡಿಗಳು ಸೇರಿದಂತೆ ಸಂಪೂರ್ಣ ಕಟ್ಟಡವನ್ನು ಮಹಾಮಸ್ತಕಾಭಿಷೇಕ ಮುಗಿಯುವವರೆವಿಗೂ ಬಿಟ್ಟುಕೊಡುವಂತೆ ಕಾರ್ಯಧ್ಯಕ್ಷರು, ಮಹಾಮಸ್ತಕಾಭಿಷೇಕ ಕಮಿಟಿ – 2018 ಇವರು ಕೋರಿರುವ ಹಿನ್ನೆಲೆಯಲ್ಲಿ ಮೇಲ್ಕಂಡ ಅವಧಿಗೆ ರಜೆ ಘೋಷಿಸಬೇಕೆಂದು ಕೋರಿ ಈ ಅವಧಿಯಲ್ಲಿ ನಷ್ಟವಾಗುವ ತರಗತಿಗಳನ್ನು ರಜೆ ಅವಧಿಯಲ್ಲಿ ಮತ್ತು ಕೆಲಸದ ದಿನಗಳಲ್ಲಿ ಹೆಚ್ಚಿನ ಅವಧಿಯನ್ನು ಉಪಯೋಗಿಸಿಕೊಂಡು ವಿಶೇಷ ತರಗತಿಗಳನ್ನು ನಡೆಸುವುದರ ಮೂಲಕ ನಿಗಧಿತ ಪಾಠ ಪ್ರವಚನಗಳನ್ನು ಮುಗಿಸಲಾಗುವುದು ಎಂದು ವಿನಂತಿಸಿರುವುದನ್ನು ಒಂದು ವಿಶೇಷ ಸಂದರ್ಭದ ಮೇರೆಗೆ ಪರಿಗಣಿಸಿ, ಕೆಳಕಂಡ ಷರತ್ತುಗಳನ್ವಯ ಮಹಾಮಸ್ತಕಾಭಿಷೇಕ ಪ್ರಾರಂಭವಾಗುವ **ದಿನಾಂಕ:04-02-2018 ರಿಂದ 26-02-2018ರವರೆಗೆ** ಶ್ರೀ ಬಾಹುಬಲಿ ಪಾಲಿಟೆಕ್ನಿಕ್, ಶ್ರವಣಬೆಳಗೊಳ ಈ ಸಂಸ್ಥೆಯ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುವಂತೆ ವಿಶೇಷ ರಜೆ ನೀಡಲು ಅನುಮತಿ ನೀಡಲಾಗಿದೆ.

1. ಪಠ್ಯಕ್ರಮದನ್ವಯ ಪಾಠ ಪ್ರವಚನಗಳನ್ನು ನಿಗಧಿತ ಅವಧಿಯ ಒಳಗೆ ರಜೆ ಅವಧಿಯಲ್ಲಿ ಹಾಗೂ ದೈನಂದಿನ ಕೆಲಸದ ದಿನಗಳಲ್ಲಿ ಹೆಚ್ಚಿನ ಅವಧಿಯನ್ನು ಉಪಯೋಗಿಸಿಕೊಂಡು ಮುಗಿಸುವುದು.
2. ಈ ರೀತಿ ವಿಶೇಷ ತರಗತಿಗಳನ್ನು ತೆಗೆದುಕೊಂಡು ನಿಗಧಿತ ಪಾಠ ಪ್ರವಚನಗಳನ್ನು ಮುಗಿಸುವ ಸಂಬಂಧದಲ್ಲಿ ತೆಗೆದುಕೊಳ್ಳಲಾದ ಕ್ರಮದ ಬಗ್ಗೆ ನಿರ್ದೇಶಕರು/ಕಾರ್ಯದರ್ಶಿಯವರಿಗೆ ವರದಿ ಮಾಡತಕ್ಕದ್ದು.

ನಿರ್ದೇಶಕರು

**ಇವರಿಗೆ,**

ಪ್ರಾಂಶುಪಾಲರು,
ಶ್ರೀ ಬಾಹುಬಲಿ ಪಾಲಿಟೆಕ್ನಿಕ್,
ಶ್ರವಣಬೆಳಗೊಳ.

08/01/18

ಪ್ರತಿ:-

1. ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
2. ಜಂಟಿ ನಿರ್ದೇಶಕರು(ತನಿಖೆ),
3. ಐಎನ್‌ಎಸ್ ವಿಭಾಗಗಳಿಗೆ,
4. ಸಂಯೋಜನಾಧಿಕಾರಿಗಳು, ಇ-ಆಡಳಿತ ವಿಭಾಗ – ಸದರಿ ಜ್ಞಾಪನ ಪತ್ರವನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
5. ಹೆಚ್ಚುವರಿ ಪ್ರತಿ.